ಪ್ರಜಾವಾಣಿ
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

**Wednesday 26th June 2019, Page No.12**

# Grandmaster tribute to Girish RVCE Student

ಮೈಸೂರಿನ ಆಟಗಾರನ ಅಮೋಘ ಸಾಧನೆ; ಫಿಡೆಯಿಂದ ಅಧಿಕೃತ ಘೋಷಣೆ ಬಾಕಿ

## ಗಿರೀಶ್‌ಗೆ ಗ್ರ್ಯಾಂಡ್‌ಮಾಸ್ಟರ್ ಗೌರವ

• ಕೆ.ಓಂಕಾರ ಮೂರ್ತಿ

ಮೈಸೂರು: ಚೆಸ್ ಪ್ರತಿಭೆ ಮೈಸೂರಿನ ಗಿರೀಶ್ ಎ.ಕೌಶಿಕ್ ಅವರು ಗ್ರ್ಯಾಂಡ್ ಮಾಸ್ಟರ್ (ಜಿ.ಎಂ) ಗೌರವಕ್ಕೆ ಪಾತ್ರರಾಗಿದ್ದಾರೆ.

ಹಂಗರಿಯ ಬುಡಾಪೆಸ್ಟ್‌ನಲ್ಲಿ ಈಚೆಗೆ ನಡೆದ 'ಬುಡಾಪೆಸ್ಟ್ ಗ್ರ್ಯಾಂಡ್ ಮಾಸ್ಟರ್ ಚೆಸ್ ಚಾಂಪಿಯನ್‌ಷಿಪ್'ನಲ್ಲಿ ಅವರು ಈ ಪಟ್ಟಕ್ಕೆ ಅಗತ್ಯವಿದ್ದ ಮೂರನೇ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಪೂರೈಸಿದ್ದಾರೆ. ಅಲ್ಲದೇ, ಮತ್ತೊಂದು ಟೂರ್ನಿಯಲ್ಲಿ ಆಡಿ ಈ ಪದವಿಗೇರಲು ಅಗತ್ಯವಿದ್ದ 2,500 ಇಎಲ್‌ಒ ರೇಟಿಂಗ್ ಕಲೆಹಾಕಿದ್ದಾರೆ.

ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ಕರ್ನಾಟಕದ ಮೂರನೇ ಮತ್ತು ಭಾರತದ 63ನೇ ಸ್ಪರ್ಧಿ ಎಂಬ ಗೌರವ ಅವರಿಗೆ ಒಲಿದಿದೆ. ಅವರೀಗ ಒಟ್ಟು 2,501 ಇಎಲ್‌ಒ ರೇಟಿಂಗ್ ಹೊಂದಿದ್ದಾರೆ. ಮುಂದಿನ ವಾರ ಫಿಡೆ ರೇಟಿಂಗ್ ಪಟ್ಟಿ ಪರಿಷ್ಕೃತಗೊಳ್ಳಲಿದ್ದು, ಸದ್ಯದಲ್ಲೇ ಅಧಿಕೃತ ಘೋಷಣೆ ಹೊರಬೀಳಲಿದೆ.

**ಮುಖ್ಯಾಂಶಗಳು**

- ಈ ಸಾಧನೆ ಮಾಡಿದ ಕರ್ನಾಟಕದ ಮೂರನೇ ಆಟಗಾರ
- ಎಂಜಿನಿಯರಿಂಗ್ ಪದವಿ ಮುಗಿಸಿರುವ ಕೌಶಿಕ್
- ಗ್ರ್ಯಾಂಡ್‌ಮಾಸ್ಟರ್ ಪದವಿ ಗಿಟ್ಟಿಸಿರುವ ರಾಜ್ಯದ ತೇಜ್‌ಕುಮಾರ್, ಸ್ವಾನಿ

'ಚೆಸ್ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಬೇಕೆಂಬ ಕನಸು ಕಟ್ಟಿಕೊಂಡಿದ್ದೇನೆ. ಆ ಹಾದಿಯಲ್ಲಿ ಈಗ ಮೊದಲ ಯಶಸ್ಸು ಸಿಕ್ಕಿದೆ.

ಕಷ್ಟದ ಹಾದಿಯಲ್ಲಿ ಸಾಗಿ ಗ್ರ್ಯಾಂಡ್ ಮಾಸ್ಟರ್ ಗೌರವ ಗಿಟ್ಟಿಸಿಕೊಂಡಿದ್ದೇನೆ. ಮುಂದಿನ ಹೆಜ್ಜೆ ಇಡಲು ಈ ಸಾಧನೆ ಸ್ಫೂರ್ತಿಯಾಗಲಿದೆ. ಇನ್ನೂ ದೊಡ್ಡ ಸಾಧನೆ ಮಾಡಬೇಕು. ಅದಕ್ಕೆ ಬೆಂಬಲವೂ ಅಗತ್ಯವಿದೆ' ಎಂದು ಗಿರೀಶ್ ಕೌಶಿಕ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

2017ರ ಸೆಪ್ಟೆಂಬರ್‌ನಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರಿದ್ದ ಮೈಸೂರಿನವರೇ ಆದ ತೇಜ್‌ಕುಮಾರ್ ಈ ಸಾಧನೆ ಮಾಡಿದ ರಾಜ್ಯದ ಮೊದಲ ಆಟಗಾರ. ಆ ಬಳಿಕ ಶಿವಮೊಗ್ಗದ ಜಿ.ಎ. ಸ್ಟ್ಯಾನಿ ಈ ಗೌರವ ಪಡೆದಿದ್ದರು.

2,444 ಇಎಲ್‌ಒ ರೇಟಿಂಗ್ ಹೊಂದಿದ್ದ ಕೌಶಿಕ್ ಕಳೆದ ಎರಡು ತಿಂಗಳಿನಿಂದ ಯೂರೋಪ್‌ನಲ್ಲಿ ವಿವಿಧ ಟೂರ್ನಿಗಳಲ್ಲಿ ಆಡುತ್ತಿದ್ದಾರೆ. ಸ್ಪೇನ್ ಹಾಗೂ ಹಂಗರಿಯಲ್ಲಿ ನಡೆದ ಮೂರು ಟೂರ್ನಿಗಳಲ್ಲಿ 57 ಇಎಲ್‌ಒ ಪಾಯಿಂಟ್ ಪಡೆದಿದ್ದಾರೆ.

ವಿಶ್ವ ಯೂತ್ ಹಾಗೂ ಏಷ್ಯನ್ ಯೂತ್ ಚೆಸ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿ ಸಂಚಲನ ಮೂಡಿಸಿದ್ದ ಕೌಶಿಕ್, ಆರ್ಥಿಕ ತೊಂದರೆಯಿಂದಾಗಿ ಹಲವು ವರ್ಷ ಯಾವುದೇ ಟೂರ್ನಿಯಲ್ಲಿ ಪಾಲ್ಗೊಂಡಿರಲಿಲ್ಲ. ಬದಲಾಗಿ ವ್ಯಾಸಂಗಕ್ಕೆ ಆದ್ಯತೆ ನೀಡಿದ್ದರು. ಅವರು 2011ರಲ್ಲೇ ಮೊದಲ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಪೂರೈಸಿದ್ದರು.

2017ರಿಂದ ಮತ್ತೆ ಚೆಸ್ ಆಟದಲ್ಲಿ ಸಕ್ರಿಯರಾಗಿದ್ದಾರೆ.

ಬೆಂಗಳೂರಿನ ಆರ್.ವಿ.ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಮುಗಿಸಿರುವ ಅವರೀಗ ಉದ್ಯೋಗದಲ್ಲಿದ್ದಾರೆ.



ಗಿರೀಶ್ ಕೌಶಿಕ್

> ಬೆಂಬಲ ದೊರೆಯದ ಕಾರಣ ಚೆಸ್ ತೊರೆಯಲು ಮುಂದಾಗಿದ್ದೆ. ಆದರೆ, ಈ ಕ್ರೀಡೆ ಮೇಲಿನ ಪ್ರೀತಿ ನನ್ನನ್ನು ಬಿಡಲಿಲ್ಲ. ಈಗ ದೊಡ್ಡ ಗೌರವ ತಂದುಕೊಟ್ಟಿದೆ.
> **ಗಿರೀಶ್ ಕೌಶಿಕ್, ಚೆಸ್ ಆಟಗಾರ**

**ಸಾಧನೆಯ ಹೆಜ್ಜೆಗಳು...**

* ಏಷ್ಯನ್ ಯೂತ್ ಚೆಸ್ ಟೂರ್ನಿಗಳಲ್ಲಿ ಐದು ಚಿನ್ನದ ಪದಕ
* 10 ವರ್ಷದೊಳಗಿನವರ ವಿಶ್ವ ಯೂತ್ ಚೆಸ್ ಟೂರ್ನಿಚಾಂಪಿಯನ್
* 14 ವರ್ಷದೊಳಗಿನವರ ಕಾಮನ್‌ವೆಲ್ತ್ ಚೆಸ್ ಟೂರ್ನಿಯಲ್ಲಿ ಚಿನ್ನ
* ಅಂತರರಾಷ್ಟ್ರೀಯ ಓಪನ್ ಫಿಡೆ ರೇಟೆಡ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ
* 'ಬುಡಾಪೆಸ್ಟ್ ಗ್ರ್ಯಾಂಡ್‌ಮಾಸ್ಟರ್ ಚೆಸ್ ಚಾಂಪಿಯನ್‌ಷಿಪ್'ನಲ್ಲಿ ಅಗ್ರಸ್ಥಾನ